ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/132/2020-21

ದಿನಾಂಕ 11-01-2022

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 23-12-2021ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 23-12-2021ರಂದು ಬೆಳಿಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 01-02-2022ರ ಒಳಗಾಗಿ, ಉಪ ಕುಲಸಚಿವರು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

Lingaraju 11/01/2022
ಉಪ ಕುಲಸಚಿವರು(ಪ್ರಾಧಿಕಾರ)

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

## ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 23-12-2021ರ ಗುರುವಾರದಂದು ಪೂರ್ವಾಹ್ನ 11.30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳ.**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ.ಹೇಮಂತ ಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಆರ್.ಧರ್ಮಸೇನ, ಎಂ.ಎಲ್.ಸಿ | ಸದಸ್ಯರು |
| 3. | ಆಯುಕ್ತರು, ಕಾಲೇಜು ಶಿಕ್ಷಣ, ಬೆಂಗಳೂರು. ಇವರ ಪರವಾಗಿ ಶ್ರೀ ಕೆ.ಸಿ.ವೀರಭದ್ರಯ್ಯ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 4. | ಶ್ರೀ ದಿನೇಶ್ ಎಂ ಗಾವಂಕರ್ | ಸದಸ್ಯರು |
| 5. | ಡಾ. ಎಂ.ಶಾರದ | ಸದಸ್ಯರು |
| 6. | ಡಾ: ಜಿ.ಗೋವಿಂದರಾಜು | ಸದಸ್ಯರು |
| 7. | ಶ್ರೀಮತಿ ನಾಗರತ್ನಮ್ಮ | ಸದಸ್ಯರು |
| 8. | ಡಾ. ಜೆ.ಎನ್.ವೆಂಕಟೇಶ್ | ಸದಸ್ಯರು |
| 9. | ಡಾ: ಬಿ.ರಾಜಣ್ಣ | ಸದಸ್ಯರು |
| 9. | ಡಾ. ನಿರ್ಮಲ ಹೆಚ್.ಎಂ. | ಸದಸ್ಯರು |
| 10. | ಡಾ. ವೆಂಕಟೇಶಯ್ಯ | ಸದಸ್ಯರು |
| 11. | ಶ್ರೀ ಎಸ್.ನಂದೀಶ್ | ಸದಸ್ಯರು |
| 12. | ಶ್ರೀ ಟಿ.ನಾಗರಾಜು | ಸದಸ್ಯರು |
| 13. | ಡಾ. ಎಸ್.ಟಿ.ಪ್ರಶಾಂತ್ | ಸದಸ್ಯರು |
| 14. | ಪ್ರೊ.ಕೆ.ವಿ.ಅಯ್ಯಣ್ಣ | ಸದಸ್ಯರು |
| 15. | ಶ್ರೀ ಹೆಚ್.ಪಿ.ಶಶಿಕುಮಾರ್ | ಸದಸ್ಯರು |
| 16. | ಡಾ: ಭಾಗ್ಯಲಕ್ಷ್ಮಿ | ಸದಸ್ಯರು |
| 17. | ಡಾ. ಬಿಂದು ಅನಿಲ್ ಥಾಮಸ್ | ಸದಸ್ಯರು |
| 18. | ಶ್ರೀ. ಶಿವಕುಮಾರ್ ಎಂ. | ಸದಸ್ಯರು |
| 19. | ಶ್ರೀ ಎಂ.ಸಿ.ರಾಜಶೇಖರ್ | ಸದಸ್ಯರು |
| 20. | ಡಾ: ವೈ.ಬಿ.ಬಸವರಾಜು | ಸದಸ್ಯರು |
| 21. | ಪ್ರೊ. ಮುಜಾಫರ್ ಹೆಚ್ ಅಸ್ಸಾದಿ | ಸದಸ್ಯರು |
| 22. | ಪ್ರೊ. ಎಂ.ಜಿ.ಮಂಜುನಾಥ್ | ಸದಸ್ಯರು |
| 23. | ಪ್ರೊ. ರಮೇಶ್ | ಸದಸ್ಯರು |
| 24. | ಪ್ರೊ. ನಿಂಗಮ್ಮ ಸಿ ಬೆಟ್ಸೂರ್ | ಸದಸ್ಯರು |
| 25. | ಪ್ರೊ. ಹೆಚ್.ರಾಜಶೇಖರ್ | ಸದಸ್ಯರು |
| 26. | ಪ್ರೊ.ಹೆಚ್.ಟಿ.ಬಸವರಾಜಪ್ಪ | ಸದಸ್ಯರು |

27. ಪ್ರೊ.ಎಂ.ಎಸ್.ಶೇಖರ್ ಸದಸ್ಯರು

28. ಪ್ರೊ.ಜಿ.ಆರ್.ಜನಾರ್ಧನ ಸದಸ್ಯರು

29. ಡಾ: ಪಿ. ಸರಸ್ವತಿ, ಗ್ರಂಥಪಾಲಕರು (ಪ್ರಭಾರ) ಸದಸ್ಯರು

30. ಪ್ರೊ. ಎನ್.ಕೆ. ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ಹಾಗೂ ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯರು

31. ಡಾ: ಪಿ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ಸದಸ್ಯರು

32. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) ಸದಸ್ಯರು

33. ಡಾ: ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು ಸದಸ್ಯರು

34. ಪ್ರೊ. ಆರ್.ಶಿವಪ್ಪ, ಕುಲಸಚಿವರು ಸದಸ್ಯ ಕಾರ್ಯದರ್ಶಿ

<u>ಸಭೆಯಲ್ಲಿ ಗೈರುಹಾಜರಾಗಿರುವವರು:</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು ಸದಸ್ಯರು
2. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಎಂ.ಎಲ್.ಎ ಸದಸ್ಯರು
3. ಶ್ರೀ ಪ್ರೀತಂ ಜೆ ಗೌಡ, ಎಂ.ಎಲ್.ಎ ಸದಸ್ಯರು
4. ಶ್ರೀ ಎಂ.ಶ್ರೀನಿವಾಸ್, ಎಂ.ಎಲ್.ಎ ಸದಸ್ಯರು
5. ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ ಸದಸ್ಯರು
6. ಶ್ರೀ ಎಂ.ಎ.ಗೋಪಾಲಸ್ವಾಮಿ, ಎಂ.ಎಲ್.ಎ ಸದಸ್ಯರು
7. ಡಾ: ಕೆ.ವಿ.ಸುರೇಶ್ ಸದಸ್ಯರು
8. ಡಾ. ಬಿ.ಎನ್.ಆಶಾ ಸದಸ್ಯರು
9. ಡಾ: ಎಸ್. ಟಿ. ರಾಮಚಂದ್ರ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಸದಸ್ಯರು

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ನಂತರ ಇದುವರೆಗೂ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ.ವೆಂಕಟೇಶ್ ಕುಮಾರ್,ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಹಾಗೂ ಹೊಸದಾಗಿ ನಾಮನಿರ್ದೇಶನಗೊಂಡಿರುವ ಪ್ರೊ.ಹೆಚ್.ಟಿ.ಬಸವರಾಜಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಪರಿಚಯಿಸಿ ಸಭೆಗೆ ಸ್ವಾಗತಿಸಿದರು.

ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ |
|---|---|
| I.1 | ದಿನಾಂಕ: 24-09-2021ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 24-09-2021ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.** |
| I.II | ದಿನಾಂಕ: 07-10-2021ರಂದು ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 07-10-2021ರಂದು ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.** |
| I.III | ದಿನಾಂಕ: 22-10-2021ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 22-10-2021ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.** |
| | **ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು:** |
| II.I | 2017-18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ 47(3)ರಡಿ ಲೆಕ್ಕಪರಿಶೋಧನೆ ಕೈಗೊಂಡು ಮೈಸೂರು ವಿಶ್ವವಿದ್ಯಾನಿಲಯದ 2017-18ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಬಿಡುಗಡೆಗೊಳಿಸಿ ಇದಕ್ಕೆ ಸೂಕ್ತವಾದ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸರ್ಕಾರಿ ಲೆಕ್ಕಪರಿಶೋಧಕರು ತಿಳಿಸಿರುತ್ತಾರೆ.<br>2017-18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನೆ ಅನುಪಾಲನಾ ವರದಿಯ ಕರಡನ್ನು ದಿನಾಂಕ 15.11.2021 ಮತ್ತು 11.12.2021 ರಂದು ನಡೆದ ಸಿಂಡಿಕೇಟ್ / ಹಣಹಾಸು ಸಮಿತಿ ಸಭೆಯ ಮುಂದೆ ಮಂಡಿಸಲಾಗಿ ಸಮಿತಿಯು ಪರಿಶೀಲಿಸಿ ಅನುಮೋದನೆಯನ್ನು ನೀಡಿರುತ್ತದೆ.<br>ಸಿಂಡಿಕೇಟ್ / ಹಣಕಾಸು ಸಮಿತಿ ಸಭೆಯಿಂದ ಅನುಮೋದಿಸಿರುವ ಪ್ರಸ್ತಾವನೆಯನ್ನು 2017-18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನೆಯ ಅನುಪಾಲನಾ ವರದಿಯ ಕರಡನ್ನು ಶೈಕ್ಷಣಿಕ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಾನ್ಯ ಕುಲಪತಿಗಳು ಮಂಡಿಸಿದರು. |
| ತೀರ್ಮಾನ | **ಸಿಂಡಿಕೇಟ್ / ಹಣಕಾಸು ಸಮಿತಿ ಸಭೆಯಿಂದ ಅನುಮೋದಿಸಿರುವ ಪ್ರಸ್ತಾವನೆಯನ್ನು 2017-18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನೆಯ ಅನುಪಾಲನಾ ವರದಿಯ ಕರಡನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

| | |
|---|---|
| II.2 | ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕಡಿಮೆ/ಹೆಚ್ಚು ಕ್ರೆಡಿಟ್ ಪಡೆದಿರುವ ವಿದ್ಯಾರ್ಥಿಗಳಿಗೆ ಫಲಿತಾಂಶ ಪ್ರಕಟಿಸಿರುವುದಕ್ಕೆ ಅನುಸಮರ್ಥನೆ ಪಡೆಯುವ ಬಗ್ಗೆ. |
| | 2018-19ನೇ ಶೈಕ್ಷಣಿಕ ಸಾಲಿನ UG-CBCS Regulations ಪ್ರಕಾರ ಪ್ರವೇಶ ಪಡೆದ ವಿದ್ಯಾರ್ಥಿಗಳ ಪದವಿಯನ್ನು ಪಡೆಯಲು ಕನಿಷ್ಠ 146 ಕ್ರೆಡಿಟ್ ಗಳ ಅವಶ್ಯಕತೆ ಇರುತ್ತದೆ. ಈ ಕೆಳಕಂಡ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ಮತ್ತು ಬೇರೆ ವಿಶ್ವವಿದ್ಯಾನಿಲಯಗಳಿಂದ ವರ್ಗಾವಣೆ ಪಡೆದು ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ one time opportunity ಅಡಿಯಲ್ಲಿ ಪರಿಗಣಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಪಡದಿದ್ದು ಹಾಗೂ ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಫಲಿತಾಂಶ ಪ್ರಕಟಿಸಿ ಹಾಗೂ ಅಂಕಪಟ್ಟಿ ನೀಡಿರುವ ಬಗ್ಗೆ.<br>1) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು ಹಾಗೂ ಕ್ರೈಸ್ಟ್ ಕಾಲೇಜು, ಮೈಸೂರು ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು 5ನೇ ಮತ್ತು 6ನೇ ಸೆಮಿಸ್ಟರ್ ನಲ್ಲಿ ಸಂಖ್ಯಾಶಾಸ್ತ್ರ ವಿಷಯದಲ್ಲಿ ಕಡಿಮೆ ಕ್ರೆಡಿಟ್ ತೆಗೆದುಕೊಂಡಿದ್ದು, ಮಾಹಿತಿಯ ಕೊರತೆಯಿಂದ ಒಟ್ಟಾರೆ 140 ಕ್ರೆಡಿಟ್‌ಗಳಿಗೆ ಮಾತ್ರ ಪರೀಕ್ಷೆ ಹಾಜರಾಗಿರುತ್ತಾರೆ. ಪ್ರಸ್ತುತ 2021-22ನೇ ಶೈಕ್ಷಣಿಕ ಸಾಲಿನ ಪಿ.ಜಿ. ಪ್ರವೇಶಗಳ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ, ಉಳಿಕೆ ಕ್ರೆಡಿಟ್‌ಗಳಿಗೆ ಈ ಹಂತದಲ್ಲಿ ಪರೀಕ್ಷೆ ನಡೆಸಿ, ಫಲಿತಾಂಶ ನೀಡುವುದು ಕಷ್ಟಕರವಾಗಿರುವುದರಿಂದ ಮೇಲೆ ತಿಳಿಸಿರುವ ಎರಡು ಕಾಲೇಜುಗಳ ಸಂಖ್ಯಾಶಾಸ್ತ್ರ ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೆ 140 ಕ್ರೆಡಿಟ್‌ಗಳಿಗೆ ಫಲಿತಾಂಶ ಪ್ರಕಟಿಸಿರುವುದಕ್ಕಾಗಿ ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆ ಹಾಗೂ ಅನುಸಮರ್ಥನೆಗೆ ಮಂಡಿಸಿದೆ.<br>2) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು, ಈ ಕಾಲೇಜಿನಲ್ಲಿ ಬಿ.ಕಾಂ ಕೋರ್ಸಿನ ವಿದ್ಯಾರ್ಥಿಗಳು 5ನೇ ಸೆಮಿಸ್ಟರ್‌ನಲ್ಲಿ SEC ವಿಷಯದ ಬದಲಾಗಿ DSE ಒಂದು ಪತ್ರಿಕೆಯನ್ನು ಹೆಚ್ಚುವರಿಯಾಗಿ ಪರೀಕ್ಷೆ ತೆಗದುಕೊಂಡಿರುತ್ತಾರೆ. ಇದರಿಂದ ವಿದ್ಯಾರ್ಥಿಗಳ ಒಟ್ಟಾರೆ ಕೋರ್ಸಿನ ಕ್ರೆಡಿಟ್ 146 ರ ಬದಲಾಗಿ 147 ಕ್ರೆಡಿಟ್ ಪಡೆದಿರುತ್ತಾರೆ. ಆದ್ದರಿಂದ ಸದರಿ ಕಾಲೇಜುಗಳ ವಿದ್ಯಾರ್ಥಿಗಳಿಗೆ 147 ಕ್ರೆಡಿಟ್ ಗಳಿಗೆ ಫಲಿತಾಂಶ ಪ್ರಕಟಿಸಿರುವುದಕ್ಕಾಗಿ ಹಾಗೂ ಅಂಕಪಟ್ಟಿ ನೀಡಲು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆ ಹಾಗೂ ಅನುಸಮರ್ಥನೆಗೆ ಮಂಡಿಸಿದೆ.<br>3) UG-CBCS Regulations ಪ್ರಕಾರ Diploma in Commercial Practice ಪಡೆದ ವಿದ್ಯಾರ್ಥಿಗಳು ನೇರವಾಗಿ ಎರಡನೇ ವರ್ಷದ B.com/BBA ಕೋರ್ಸ್‌ಗಳಿಗೆ lateral entry ಮೂಲಕ ಪ್ರವೇಶಕ್ಕೆ ಅವಕಾಶವಿರುತ್ತದೆ. ಜೊತೆಗೆ ಬೇರೆ ವಿಶ್ವವಿದ್ಯಾನಿಲಯದಿಂದ ಈ ಎರಡನೇ ವರ್ಷಕ್ಕೆ ವರ್ಗಾವಣೆಯ ಮೂಲಕ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಸಹ ಕ್ರೆಡಿಟ್‌ಗಳು ಕಡಿಮೆ ಇರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಡೆದಿರುವ ಕ್ರೆಡಿಟ್ ಗಳ ಆಧಾರದ ಮೇಲೆ ಫಲಿತಾಂಶ ಪ್ರಕಟಿಸಲು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆ ಹಾಗೂ ಅನುಸಮರ್ಥನೆಗೆ ಮಂಡಿಸಿದೆ.<br>ಮೇಲ್ಕಂಡಂತೆ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮಕ್ಕೆ ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗೆ ಮಂಡಿಸಿದೆ. |
| ತೀರ್ಮಾನ | ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಫಲಿತಾಂಶ ಪ್ರಕಟಿಸಿದ್ದು ಈಗಾಗಲೇ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |

| | |
|---|---|
| II.3 | ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 50(1)ರ ಪ್ರಕಾರ ಸಿದ್ಧಪಡಿಸಲಾಗಿರುವ ವಿಶ್ವವಿದ್ಯಾನಿಲಯದ 2020-21ನೇ ಸಾಲಿನ (ದಿನಾಂಕ 01-04-2020 ರಿದ 31-03-2021 ರವರಗೆ) ವಾರ್ಷಿಕ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.4 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ 2021-22ನೇ ಸಾಲಿನಿಂದ ಅನ್ವಯವಾಗುವಂತೆ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿನ ಪದವಿ ಕೋರ್ಸ್‌ಗಳಿಗೆ ರೆಗ್ಯೂಲೇಷನ್‌ನ್ನು ಅನುಮೋದಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ 2021-22ನೇ ಸಾಲಿನಿಂದ ಅನ್ವಯವಾಗುವಂತೆ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿನ ಪದವಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಕರಡು ರೆಗ್ಯೂಲೇಷನ್‌ನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಈಗಾಗಲೇ ಕಳುಹಿಸಲಾಗಿರುತ್ತದೆ ಎಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ 2021-22ನೇ ಸಾಲಿನಿಂದ ಅನ್ವಯವಾಗುವಂತೆ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿನ ಪದವಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಕರಡು ರೆಗ್ಯೂಲೇಷನ್‌ನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.5 | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31(2) (IX) ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡುವ ಸಂಬಂಧ ಹಲವು ದಾನಿಗಳು ಅನುಮತಿ ಕೋರಿ ಡಿ.ಡಿ. ಮತ್ತು ಚೆಕ್‌ಗಳನ್ನು ಸಲ್ಲಿಸಿದ್ದು ಅವುಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲಾಗಿದ್ದು, ಸದರಿ ದತ್ತಿಯ ಮೂಲ ಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ಮೂಲ ಧನಕ್ಕೆ ಸೇರಿಸಿ ಶೇಕಡ 80ರಷ್ಟು ಬಡ್ಡಿಯ ಹಣದಲ್ಲಿ ಚಿನ್ನದ ಪದಕಗಳನ್ನು ಅರ್ಹ ಅಭ್ಯರ್ಥಿಗಳಿಗೆ ನೀಡಲು ಕೋರಿರುವುದರಿಂದ ಈ ಕೆಳಕಂಡಂತೆ ನಮೂದಿಸಿರುವ ಆರು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ/ದ್ವಿತೀಯ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಮುಂಬರುವ ವಾರ್ಷಿಕ ಘಟಿಕೋತ್ಸವದಲ್ಲಿ ನೀಡಬೇಕೆಂದು ಕೋರಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

| ಕ್ರಮ ಸಂಖ್ಯೆ | ದಾನಿಗಳ ಹೆಸರು ಮತ್ತು ವಿಳಾಸ | ದತ್ತಿಗಳ ಹೆಸರು | ಚಿನ್ನದ/ಪದಕ /ನಗದು ಬಹುಮಾನ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|---|
| 01. | ಶಶಿಕಲ ಮುನಿಯಪ್ಪ, #266, ಸೊನಾರ್ ಸ್ಟ್ರೀಟ್, ಮೈಸೂರು-570024. | ಶ್ರೀ.ಹನುಮಪ್ಪ ಶ್ರೀಮತಿ ಚಿನ್ನಮ್ಮ ಯಮಲೂರು | ನಗದು ಬಹುಮಾನ | Master in Social work-Securing Second highest Marks | 50.000/- |

| | | | | | | |
|---|---|---|---|---|---|---|
| | 02. | ಶಶಿಕಲ ಮುನಿಯಪ್ಪ, #266, ಸೊನಾರ್ ಸ್ಟ್ರೀಟ್, ಮೈಸೂರು-2570024. | ಶ್ರೀ.ವೈ.ಮುನಿಯಪ್ಪ ಶ್ರೀಮತಿ ರುಕ್ಮಿಣಿಯಮ್ಮ | ಚಿನ್ನದ ಪದಕ | M.A in History-Securing highest Marks | 1.00.000/- |
| | 03. | ಶಶಿಕಲ ಮುನಿಯಪ್ಪ, #266, ಸೊನಾರ್ ಸ್ಟ್ರೀಟ್, ಮೈಸೂರು-570024. | ಡಾ:ಹೆಚ್.ಸುದರ್ಶನ್ | ಚಿನ್ನದ ಪದಕ | Master in Social work-Securing highest Marks | 1.00.000/- |
| | 04. | ರೇಣು ಮಹೇಶ್, #730/1, ಇ & ಎಫ್ ಬ್ಲಾಕ್, ಗಂಗೆ ರೋಡ್, ಕುವೆಂಪುನಗರ, ಮೈಸೂರು-570023. | ಪ್ರೊ.ಬಿ.ಯು.ಓಂಕಾರಪ್ಪ ಶ್ರೀಮತಿ ನಿರ್ಮಲ, ದಾವಣಗೆರೆ | ಚಿನ್ನದ ಪದಕ | L.L.M-Securing Highest Marks | 1.00.000/- |
| | 05. | ಲೇಟ್.ಶ್ರೀಮತಿ ನಾಗಮಣಿ ಸುಂದರರಾಜ್ ಐಯ್ಯಂಗಾರ್, ಶ್ರೀ ನರಸಿಂಹ ಕೃಪ, #1964/1, ನ್ಯೂ 88/1, 3ನೇ ಕ್ರಾಸ್, ಕೊತ್ವಾಲ್ ರಾಮಯ್ಯ ಸ್ಟ್ರೀಟ್, ದೇವರಾಜ ಮೊಹಲ್ಲಾ, ಮೈಸೂರು-01 | ಲೇಟ್.ಶ್ರೀಮತಿ.ನಾಗ ಮಣಿ ಸುಂದರರಾಜ್ ಐಯ್ಯಂಗಾರ್ | ಚಿನ್ನದ ಪದಕ | M.Music (Vocal)-Securing Highest Marks | 1.00.000/- |
| | 06. | ಶ್ರೀ.ಕರುಣ್ ತಂದೂರ್, ಟ್ರಸ್ಟೀ, #162, ಅರವಿಂದ್ 1ನೇ ಕ್ರಾಸ್, 3ನೇ ಮೇನ್, ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು-78. | ಪ್ರೊ.ಎಂ.ಯಮುನಾ ಚಾರ್ಯ ಮೆಮೊರಿಯಲ್ ಟ್ರಸ್ಟ್ | ನಗದು ಬಹುಮಾನ | M.A. Philosophy-Securing Highest Marks | 1.00.000/- |

| | |
|---|---|
| II.6 | 2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.7 | 2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |

| | |
|---|---|
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.8 | 2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.9 | 2021-22 ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| **ತೀರ್ಮಾನ** | **2021-22 ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.10 | 2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.11 | 2021-22ನೇ ಶೈಕ್ಷಣಿಕ ಸಾಲಿನ ಮಂಡ್ಯ ಜಿಲ್ಲೆ, ಮದ್ದೂರು ತಾ. ಭಾರತೀನಗರದ ಭಾರತೀ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನ ಮಂಡ್ಯ ಜಿಲ್ಲೆ, ಮದ್ದೂರು ತಾ. ಭಾರತೀನಗರದ ಭಾರತೀ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.12 | 2021-22ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.13 | 2021-22ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |

| | |
|---|---|
| ತೀರ್ಮಾನ | 2021-22ನೇ ಶೈಕ್ಷಣಿಕ ಸಾಲಿನ ಹಾಸನದ 'ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.14 | 2021-22ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| ತೀರ್ಮಾನ | **2021-22ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III | ನಿಕಾಯಗಳು ಮತ್ತು ಅಧ್ಯಯನ ಮಂಡಳಗಳು ಮಂಡಿಸಿದ ವಿಷಯಗಳು: |
| III.1 | ದಿನಾಂಕ:09.12.2021ರಂದು ನಡೆದಂತಹ ಕಾನೂನು ನಿಕಾಯ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| | ಪ್ರೊ.ರಮೇಶ್, ಡೀನರು, ಕಾನೂನು ನಿಕಾಯ ರವರು ಮಾತನಾಡಿ ಕಾನೂನು ನಿಕಾಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದರು.<br><br>Five year B.A.LL.B integrated course ಗೆ ಸಂಬಂಧಿಸಿದ ರೆಗ್ಯೂಲೇಷನ್‌ನಲ್ಲಿ "Mysore University School of Justice" ಅನ್ನು "Mysore University School of Law" ಎಂದು ಬದಲಾವಣೆ ಮಾಡಿದೆ ಎಂದು ತಿಳಿಸಿದರು. UGC ನಿಯಮದಾನುಸಾರ ಕೆಲವು ಪಠ್ಯಕ್ರಮಗಳನ್ನು ಬದಲಾಯಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ.ಎಂ.ಸಿ.ರಾಜಶೇಖರ್ ಇವರು ಪ್ರವೇಶಾತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ವಯೋಮಿತಿಯ ಬಗ್ಗೆ ಪ್ರಶ್ನಿಸಿದರು.<br><br>ಅದಕ್ಕುತ್ತರವಾಗಿ ಪ್ರೊ.ರಮೇಶ್ ರವರು Bar council ನಿರ್ದೇಶನದಂತೆ ವಿದ್ಯಾರ್ಥಿಗಳ ವಯೋಮಿತಿಯನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ.ಎಂ.ಸಿ.ರಾಜಶೇಖರ್, ಶ್ರೀ.ಹೆಚ್.ಪಿ.ಶಶಿಕುಮಾರ್ ಹಾಗೂ ಪ್ರೊ.ಕೆ.ವಿ.ಅಯ್ಯಣ್ಣ ರವರು ಮಾತನಾಡಿ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಉತ್ತರ ಬರೆಯಲು ಅವಕಾಶ ಮಾಡಿಕೊಡಿ ಎಂದು ಕೋರಿದರು. ಪ್ರೊ.ರಮೇಶ್, ಡೀನರು, ಇದಕ್ಕುತ್ತರವಾಗಿ ಪಠ್ಯಕ್ರಮಗಳೆಲ್ಲವೂ ಇಂಗ್ಲಿಷ್ ಮಾಧ್ಯಮದಲ್ಲಿದ್ದು, B.Com.LLB and B.A.LLB ಕೋರ್ಸ್‌ಗಳ ಪಠ್ಯಕ್ರಮಗಳು ಸಂಪೂರ್ಣವಾಗಿ ಕನ್ನಡದಲ್ಲಿ ದೊರಕುತ್ತಿಲ್ಲ, ವಿದ್ಯಾರ್ಥಿಗಳು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಹಾಗೂ ವಿದ್ಯಾರ್ಥಿಗಳಿಗೆ General English and Functional English ಎಂದು ಎರಡು ವಿಷಯವನ್ನು ಬೋಧನೆ ಮಾಡುತ್ತಿದ್ದೇವೆ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳೆಲ್ಲವೂ ಇಂಗ್ಲಿಷ್‌ನಲ್ಲಿದ್ದು, ಹೊರ ರಾಜ್ಯದ ವಿದ್ಯಾರ್ಥಿಗಳು ಹೆಚ್ಚುವರಿ ಸಂಖ್ಯೆಯಲ್ಲಿ ಓದುತ್ತಿದ್ದಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ Medium of Instruction English ನಲ್ಲಿದ್ದು, ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಉತ್ತರ ಬರೆಯಲು ಅವಕಾಶ ಕಲ್ಪಿಸಲು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| ತೀರ್ಮಾನ | ದಿನಾಂಕ:09.12.2021ರಂದು ನಡೆದಂತಹ ಕಾನೂನು ನಿಕಾಯ (Faculty of Law) ಕಾನೂನು ನಿಕಾಯದ ಅಡಿಯಲ್ಲಿ ಬರುವ ಅಧ್ಯಯನ ಮಂಡಳಗಳು ಕೈಗೊಂಡಿರುವ ಶಿಫಾರಸ್ಸುಗಳಿಗೆ ಹಾಗೂ ಪ್ರಸ್ತುತ ತೆಗೆದುಕೊಂಡಿರುವ ನಿರ್ಣಯಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| III.2 | ದಿನಾಂಕ:29.11.2021 ರಂದು ನಡೆದ ಕಲಾ ನಿಕಾಯದ ನಡವಳಿಯ ತೀರ್ಮಾನದ ಅನುಮೋದನೆಗಾಗಿ |
| | ಪ್ರೊ. ಮುಜಾಫರ್ ಹೆಚ್ ಅಸ್ಸಾದಿ, ಡೀನರು, ಕಲಾ ನಿಕಾಯರವರು ಮಾತನಾಡಿ ಸಾರ್ವಜನಿಕ ಅಧ್ಯಯನ ವಿಭಾಗ (ಸ್ನಾತಕೋತ್ತರ) ವಿಷಯವನ್ನು ಕಲಾ ನಿಕಾಯದ ನಡವಳಿಯಲ್ಲಿ ನಮೂದಿಸಿಲ್ಲದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ ಸದರಿ ವಿಷಯವನ್ನು ಸೇರ್ಪಡೆಗೊಳಿಸುವಂತೆ ಕೋರಿದರು. ಮುಂದುವರೆದು ಎಲ್ಲಾ ಕಲಾ ಅಧ್ಯಯನ (ಸ್ನಾತಕ) ವಿಭಾಗಗಳು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಿದೆ ಹಾಗೂ ಸಾರ್ವಜನಿಕ ಅಧ್ಯಯನ ವಿಭಾಗವು (ಸ್ನಾತಕೋತ್ತರ) Flexible Choice Based Credit System ಅನ್ನು ಅನುಸರಿಸುತ್ತಿದೆ ಎಂದು ತಿಳಿಸಿದರು. |
| ತೀರ್ಮಾನ | **ದಿನಾಂಕ:29.11.2021ರಂದು ನಡೆದಂತಹ ಕಲಾ ನಿಕಾಯ (Faculty of Arts ) ಕಲಾ ನಿಕಾಯದ ಅಡಿಯಲ್ಲಿ ಬರುವ ಅಧ್ಯಯನ ಮಂಡಳಿಗಳು ಕೈಗೊಂಡಿರುವ ಶಿಫಾರಸ್ಸುಗಳಿಗೆ ಹಾಗೂ ಪ್ರಸ್ತುತ ತೆಗೆದುಕೊಂಡಿರುವ ನಿರ್ಣಯಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದಿಸಿತು.** |
| III.3 | ದಿನಾಂಕ:30.11.2021ರಂದು ನಡೆದ ವಾಣಿಜ್ಯ ನಿಕಾಯದ ನಡವಳಿಯ ತೀರ್ಮಾನದ ಅನುಮೋದನೆಗಾಗಿ. |
| | ಪ್ರೊ. ರಾಜಶೇಖರ್.ಹೆಚ್, ಡೀನರು, ವಾಣಿಜ್ಯ ನಿಕಾಯರವರು ಮಾತನಾಡಿ ವಾಣಿಜ್ಯ ನಿಕಾಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಕಾರ್ಯಸೂಚಿ ವಿಷಯ ಸಂಖ್ಯೆ 1 ರ B.Com (Hons) ರಲ್ಲಿ Consideration of M.Com (F.S.) Program to teach B.Com. and B.B.A. Programs ಗೆ ಸಂಬಂಧಿಸಿದಂತೆ ವಾಣಿಜ್ಯ ನಿಕಾಯದಲ್ಲಿ **M.Com (F.S.) graduates are eligible to teach B.Com. courses not B.B.A.programs** ಎಂದು ತೀರ್ಮಾನವನ್ನು ತೆಗೆದುಕೊಳ್ಳಲಾಯಿತು ಎಂದು ಸಭೆಯಲ್ಲಿ ಮಂಡಿಸಿದರು. |
| ತೀರ್ಮಾನ | **ದಿನಾಂಕ:30.11.2021ರಂದು ನಡೆದಂತಹ ವಾಣಿಜ್ಯ ನಿಕಾಯ (Faculty of Commerce Arts ) ವಾಣಿಜ್ಯ ನಿಕಾಯದ ಅಡಿಯಲ್ಲಿ ಬರುವ ಅಧ್ಯಯನ ಮಂಡಳಿಗಳು ಕೈಗೊಂಡಿರುವ ಶಿಫಾರಸ್ಸುಗಳಿಗೆ ಹಾಗೂ ಪ್ರಸ್ತುತ ತೆಗೆದುಕೊಂಡಿರುವ ನಿರ್ಣಯಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದಿಸಿತು.** |
| III.4 | ದಿನಾಂಕ: 2.12.2021ರಂದು ನಡೆದಂತಹ ಶಿಕ್ಷಣ ಮಂಡಳಿ ಸಭೆಯ ನಡವಳಿಯ ತೀರ್ಮಾನದ ಅನುಮೋದನೆಗಾಗಿ. |
| | ಪ್ರೊ.ನಿಂಗಮ್ಮ ಸಿ. ಬೆಟ್ಸೂರ್, ಡೀನರು, ಶಿಕ್ಷಣ ನಿಕಾಯರವರು ಮಾತನಾಡಿ ದಿನಾಂಕ: 2-12-2021 ರಂದು ನಡೆದಂತಹ ಶಿಕ್ಷಣ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದರು. |
| ತೀರ್ಮಾನ | **ದಿನಾಂಕ:02.12.2021ರಂದು ನಡೆದಂತಹ ಶಿಕ್ಷಣ ನಿಕಾಯ ಸಭೆಯ (Faculty of Education) ಶಿಕ್ಷಣ ನಿಕಾಯದ ಅಡಿಯಲ್ಲಿ ಬರುವ ಅಧ್ಯಯನ ಮಂಡಳಿಗಳು ಕೈಗೊಂಡಿರುವ ಶಿಫಾರಸ್ಸುಗಳಿಗೆ ಹಾಗೂ ಪ್ರಸ್ತುತ ತೆಗೆದುಕೊಂಡಿರುವ ನಿರ್ಣಯಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದಿಸಿತು.** |

| | |
|---|---|
| III.5 | ದಿನಾಂಕ: 20-12-2021ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ನಡವಳಿಯ ತೀರ್ಮಾನದ ಅನುಮೋದನೆಗಾಗಿ. |
| | ಪ್ರೊ.ಹೆಚ್.ಟಿ.ಬಸವರಾಜಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯಲ್ಲಿ ಅಧ್ಯಯನ ಮಂಡಳಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು ಸ್ಕೂಲ್ ಆಫ್ ಎಂಜಿನಿಯರಿಂಗ್ ಅನ್ನು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಕ್ಕೆ ವಹಿಸಲು ಕೋರಿದರು.<br><br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಲ್ಲಿ ಮೇಲ್ಕಂಡ ವಿಷಯವು ಆಕಸ್ಮಿಕವಾಗಿ ಸೇರ್ಪಡೆಯಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ದಿನಾಂಕ: 20-12-2021ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ನಡವಳಿಯ ತೀರ್ಮಾನಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.6 | Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ವಾರ್ಷಿಕ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| | ಪ್ರೊ. ರಾಜಶೇಖರ್.ಹೆಚ್, ಡೀನರು, ವಾಣಿಜ್ಯ ನಿಕಾಯರವರು ಮಾತನಾಡಿ Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ವಾರ್ಷಿಕ ಸಭೆಯ ಕಾರ್ಯಸೂಚಿ ವಿಷಯ ಸಂಖ್ಯೆ 2ರ BBA Tourism and Hospitality and BBA Tourism and Travel ಗೆ ಸಂಬಂಧಿಸಿದಂತೆ ತೆಗೆದುಕೊಂಡ ತೀರ್ಮಾನದಲ್ಲಿ **"Approved the Panel of Examiners"** ಎಂದು ತಪ್ಪಾಗಿ ನಮೂದಾಗಿದ್ದು ಇದನ್ನು ವಾಣಿಜ್ಯ ನಿಕಾಯದ ನಡವಳಿಯಲ್ಲಿ ಕೈಬಿಡಲಾಗಿದೆ ಎಂದು ತಿಳಿಸಿದರು. |
| ತೀರ್ಮಾನ | **Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ವಾರ್ಷಿಕ ಸಭೆಯ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.7 | Specialized ಕೋರ್ಸ್‌ಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಾರ್ಷಿಕ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| | ಪ್ರೊ.ಹೆಚ್.ಟಿ.ಬಸವರಾಜಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ನಡವಳಿಯ ತೀರ್ಮಾನವನ್ನು ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದರು. |
| ತೀರ್ಮಾನ | **Specialized ಕೋರ್ಸ್‌ಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಾರ್ಷಿಕ ಸಭೆಯ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.8 | ಆನ್‌ಲೈನ್ ಶಿಕ್ಷಣದಡಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಕೆಳಗೆ ನಮೂದಿಸಿದ ಹೆಚ್ಚುವರಿ Specialized/Standalone Programmes in MBA and BBA Programs ಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ:22-12-2021ರಂದು ನಡೆದ ಅಧ್ಯಯನ ಮಂಡಳಿ ಸಭೆಯ ಶಿಫಾರಸ್ಸನ್ನು ಶಿಕ್ಷಣ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |

| | | |
|---|---|---|
| | **MBA**<br>**Additional Specializations/ Standalone Programs**<br>**MBA Specializations to be Introduced**<br>Based on areas of focus<br>Strategy & Leadership<br>Entrepreneurship<br>Executive Leadership<br>Small & Medium Business Management<br>Data Science & Business Analytics<br>Digital Marketing<br>Based in Industry<br>Information Technology Business Management<br>Health Care Administration<br>Aviation Management<br>Pharma & Biotechnology | **BBA**<br>**Additional Specializations/ Standalone Programs**<br>**BBA Specialization to be introduced**<br>HR Management<br>Marketing Management<br>Financial Management<br>Supply Chain Management<br>Operations Management<br>Retail Management<br>Banking, Financial Services & Insurance<br>Hospitality & Travel Tourism<br>Digital Marketing<br>Aviation Management<br>Health Care Administration<br>Data Science & Business Analytics<br>Event Management |
| ತೀರ್ಮಾನ | **ಆನ್‌ಲೈನ್ ಶಿಕ್ಷಣದಡಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಮೇಲ್ಕಾಣಿಸಿದ ಹೆಚ್ಚುವರಿ Specialized/Standalone Programmes in MBA and BBA Programs ಗಳನ್ನು ಅಳವಡಿಸಿಕೊಳ್ಳುವ ಸಂಬಂಧ ವಾಣಿಜ್ಯ ನಿಕಾಯದ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** | |

**ಇತರೆ ವಿಷಯ:**

ಶ್ರೀ.ಟಿ.ನಾಗರಾಜುರವರು ಮಾತನಾಡಿ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಶಿಕ್ಷಣ ಮಂಡಳಿಯ ಸದಸ್ಯರನ್ನು ಸಹ ಪರಿವೀಕ್ಷಣಾ ಸದಸ್ಯರನ್ನಾಗಿ ನೇಮಕ ಮಾಡುವಂತೆ ಮನವಿ ಮಾಡಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲವೆಂದು, ಸರ್ಕಾರದಿಂದ ನಿರ್ದೇಶನ ಬಂದ ನಂತರ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸಹಿ/-
**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿಗಳು ಮತ್ತು ಅಧ್ಯಕ್ಷರು**